## ಸೂಕ್ತಿಪ್ರಭ

**ಇಂದಿನ** ನೋವನ್ನು ಇಂದೇ ಸಹಿಸಿಕೊಳ್ಳಿ, ನಿನ್ನೆಯದಕ್ಕೆ ಅದನ್ನು ಸೇರಿಸಬೇಡಿ. ಅಷ್ಟೇ ಅಲ್ಲ, ನಾಳೆಯದನ್ನು ಇಂದೇ ಹೊರಲು ಪ್ರಯತ್ನಿಸಬೇಡಿ.

—**ಆರೆಲಿಯಾನೋ ಟಾಪಿಯಾ ಮೆಂಡೆಜ್**

**ಇಂದಿನ** ಜೀವನದ ಅತ್ಯಂತ ದುಃಖಮಯ ಸಂಗತಿಯೆಂದರೆ ಸಮಾಜವು ವಿವೇಕವನ್ನು ಗಳಿಸುವುದರೊಳಗೆ ಅದನ್ನು ಅತಿಕ್ರಮಿಸಿ ವಿಜ್ಞಾನವು ಬಹಳ ಬೇಗ ಜ್ಞಾನವನ್ನು ಸಂಪಾದಿಸುತ್ತಿರುವುದು. —**ಐಸಾಕ್ ಅಸಿಮೋವ್**

**ಚಿಂತೆ** ಎನ್ನುವುದು ತೂಗುವ ಕುರ್ಚಿಯಂತೆ. ತೂಗುತ್ತಿದ್ದರೂ ಎಲ್ಲಿಗೂ ಕೊಂಡೊಯ್ಯಲಾರದು. —**ವೆಂಡೀ ಕಾಖ್**

**ಪ್ರಗತಿಯ** ಹಾದಿಯಲ್ಲಿ ಜನರನ್ನು ತುಳಿದು ಮುನ್ನುಗ್ಗಲು ನಿನಗೆಂದಿಗೂ ಅಧಿಕಾರವಿಲ್ಲ. ಆದರೆ ನಿನ್ನ ದಾರಿಗೆ ಅಡ್ಡವಾಗಿರುವವರನ್ನು ಮಾತ್ರ ದಾಟಿಹೋಗಲು ನಿನಗೆ ಹಕ್ಕಿದೆ.

—**ಸ್ಟಾರ್ ಜೋನ್ಸ್**

**ಅತ್ಯಂತ** ಉದಾತ್ತವಾದ ದೊಡ್ಡ ಭಾವನೆಗಿಂತ ಒಂದು ಚಿಕ್ಕ ಒಳ್ಳೆಯ ಕೆಲಸ ಯಾವಾಗಲೂ ಉತ್ತಮ. —**ಪಟ್ಟಿ ಲಾಬೆಲ್**

**ಯೌವನದ** ಉತ್ಸಾಹ ಸದಾ ನಮ್ಮಲ್ಲಿರಬೇಕು. ಭಗವಂತ ಮಾನವನನ್ನು ಸೃಷ್ಟಿಸಿದಾಗ ಯಾವ ಆನಂದವನ್ನು ಅನುಭವಿಸಿದನೋ ಆ ಆನಂದದ ಒಂದು ಅಂಶ ಯೌವನದಲ್ಲಿ ಪ್ರತಿಬಿಂಬಿತವಾಗುತ್ತದೆ.

—**ಪೋಪ್ ಜಾನ್ ಪಾಲ್** II

**ಸುಖವು** ಜೀವನದ ಸಣ್ಣ ಸಣ್ಣ ಘಟನೆಗಳಲ್ಲಿ, ಆಗುಹೋಗುಗಳಲ್ಲಿ ಅಡಕವಾಗಿದೆ. ಗಮನಿಸದಿದ್ದರೆ, ಅದು ಅದೃಶ್ಯವಾಗುತ್ತದೆ. —**ಜಾಯ್ಸ್ ಬ್ರದರ್ಸ್**

**ಸುಳ್ಳು** ಹೇಳುವುದು ಸಮಸ್ಯೆಯನ್ನು ಭವಿಷ್ಯಕ್ಕೂ ಉಳಿಸುತ್ತದೆ. ಸತ್ಯವು ಅದನ್ನು ಬಗೆಹರಿಸಿ ಗತಕಾಲದ್ದಾಗಿಸುತ್ತದೆ.

—**ರಿಕ್ ಪಿಟಿನೋ**

**ನಿಮ್ಮ** ಕಲ್ಪನೆಗಳನ್ನು ಕಾರ್ಯರೂಪಕ್ಕೆ ತರಲೇಬೇಕು. ನಿಮ್ಮ ಕಳೆದುಹೋದ ದಿನಗಳನ್ನು ಪುನರಾವರ್ತಿಸಲು ಪ್ರಯತ್ನಿಸಬೇಡಿ. —**ಸ್ಟೀಫನ್. ಆರ್. ಕೋವಿ**

**ಕೆಲಸವೆಂಬುದು** ನಿಗೂಢವಾದ ವಿಷಯ. ಅನೇಕರು ಅದನ್ನು ದ್ವೇಷಿಸುತ್ತೇವೆಂದು ಹೇಳುತ್ತಾರೆ. ಆದರೆ ಅದು ನಮ್ಮನ್ನು ತನ್ನ ಹಿಡಿತದಲ್ಲಿ ಎಷ್ಟರಮಟ್ಟಿಗೆ ಇರಿಸಿಕೊಳ್ಳುತ್ತದೆಂದರೆ ನಮ್ಮಲ್ಲಿ ಹುದುಗಿರುವ ಭಾವನೆಗಳನ್ನು ಹಾಗೂ ನಿಷ್ಠೆಯನ್ನು ಬಲವಂತವಾಗಿ ಹೊರಗೆಳೆಯುತ್ತದೆ. —**ಟಾಬ್ ಗ್ರೀನ್**

## ಪ್ರಾರ್ಥನೆ

**ಶತ್ರೌ ಮಿತ್ರೇ ಪುತ್ರೇ ಬಂಧೌ**
**ಮಾ ಕುರು ಯತ್ನಂ ವಿಗ್ರಹಸಂಧೌ ।**
**ಭವ ಸಮಚಿತ್ತಃ ಸರ್ವತ್ರ ತ್ವಂ**
**ವಾಂಛಸ್ಯಚಿರಾದ್ಯದಿ ವಿಷ್ಣುತ್ವಮ್ ॥**

ಶತ್ರು, ಮಿತ್ರ, ಪುತ್ರ, ಬಂಧುವರ್ಗ, ಯುದ್ಧ ಮತ್ತು ಸಂಧಿ—ಇವುಗಳಾವುದರಲ್ಲಿಯೂ ಆಸಕ್ತನಾಗಬೇಡ; ವಿಷ್ಣುತ್ವವನ್ನು ನೀನು ಶೀಘ್ರವಾಗಿ ಪಡೆಯಬೇಕಾದರೆ ಸರ್ವತ್ರ ಸಮಬುದ್ಧಿಯಿರಲಿ.

**ನಲಿನೀದಲಗತಸಲಿಲಂ ತರಲಂ**
**ತದ್ವಜ್ಜೀವಿತಮತಿಶಯಚಪಲಮ್।**
**ವಿದ್ಧಿ ವ್ಯಾಧ್ಯಭಿಮಾನಗ್ರಸ್ತಂ**
**ಲೋಕಂ ಶೋಕಹತಂ ಚ ಸಮಸ್ತಮ್॥**

ಕಮಲಪತ್ರದ ಮೇಲೆ ಇರುವ ಜಲಬಿಂದುವು ಚಂಚಲವಾಗಿರುವ ಹಾಗೆ ಜೀವನವೂ ಅತ್ಯಂತ ಚಂಚಲವಾದುದು; ವ್ಯಾಧಿ-ಅಭಿಮಾನಗಳಿಂದ ಜನರೆಲ್ಲಾ ನೊಂದು, ಶೋಕದಿಂದ ಹತರಾಗಿದ್ದಾರೆಂದು ತಿಳಿದುಕೊ.

(ದ್ವಾದಶಪಂಜರಿಕಾಸ್ತೋತ್ರ, ಶ್ರೀಶಂಕರಾಚಾರ್ಯ)

**ಕದಾಽಹಂ ಭಗವಂತಂ, ನಾರಾಯಣಂ ಮಮ ಕುಲ-ನಾಥಮ್, ಮಮ ಕುಲದೈವತಂ ಮಮ ಕುಲಧನಂ, ಮಮ ಭೋಗ್ಯಂ, ಮಮ ಮಾತರಂ, ಮಮ ಪಿತರಂ ಮಮ ಸರ್ವಂ, ಸಾಕ್ಷಾತ್ಕರವಾಣಿ ಚಕ್ಷುಷಾ?**

ನನ್ನ ಕುಲನಾಥನೂ, ನನ್ನ ಕುಲದೇವತೆಯೂ, ನನ್ನ ಕುಲಧನವೂ, ನನ್ನ ಭೋಗ್ಯವಸ್ತುವೂ ನನ್ನ ತಾಯಿಯೂ, ನನ್ನ ತಂದೆಯೂ, ನನ್ನ ಸರ್ವಸ್ವವೂ ಆಗಿರುವ ಭಗವಂತನನ್ನು, ನಾರಾಯಣನನ್ನು, ಯಾವಾಗ ತಾನೇ ನಾನು ಪ್ರತ್ಯಕ್ಷವಾಗಿ ನೋಡಬಲ್ಲೆನು?

**ಕದಾಽಹಂ ಭಗವತ್-ಪಾದಾಂಬುಜ-ದ್ವಯಂ ಸಂಗ್ರಹಿ-ಷ್ಯಾಮಿ? ಕದಾಽಹಂ ಭಗವತ್-ಪಾದಾಂಬುಜ-ದ್ವಯ-ಪರಿಚರ್ಯಾಶಯಾ ನಿರಸ್ತ-ಸಮಸ್ತೇತರ-ಭೋಗಾಶಃ, ಅಪಗತ-ಸಮಸ್ತ-ಸಾಂಸಾರಿಕ-ಸ್ವಭಾವಃ ತತ್ಪಾದಾಂಬುಜ-ದ್ವಯಂ ಪ್ರವೇಕ್ಷ್ಯಾಮಿ?**

ಯಾವಾಗ ತಾನೇ ಭಗವಂತನ ಅಡಿದಾವರೆಗಳಲ್ಲಿ ನನ್ನ ತಲೆಯನ್ನು ಇಡಬಲ್ಲೆನು? ಭಗವಂತನ ಅಡಿದಾವರೆಗಳ ಸೇವೆ ಮಾಡಬೇಕೆಂಬ ಆಶೆಯಿಂದ ಇತರ ಭೋಗಾಶೆಗಳನ್ನೆಲ್ಲ ತ್ಯಜಿಸಿ, ಸಮಸ್ತ ಸಾಂಸಾರಿಕ ಸ್ವಭಾವಗಳನ್ನು ಬಿಟ್ಟು ಎಂದು ತಾನೇ ಅವನ ಪಾದಾಂಬುಜವನ್ನು ಪ್ರವೇಶಿಸಬಲ್ಲೆನು?

(ಗದ್ಯತ್ರಯ, ಶ್ರೀವೈಕುಂಠಗದ್ಯಮ್, ಶ್ರೀರಾಮಾನುಜಾಚಾರ್ಯ)